# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಇತರೆ ಪರೀಕ್ಷೆಗಳು

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03**

ಸಂಖ್ಯೆ: ವಿ1/ವಿ.ಸ.ಪ/ಮೌ.ನೋಂ/13/2022 ದಿನಾಂಕ: 13.09.2022

## ಸುತ್ತೋಲೆ

**ವಿಷಯ:** ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಶಿಕ್ಷಕರ ನೋಂದಣಿ ಬಗ್ಗೆ.

******

2022-23ನೇ ಸಾಲಿನ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳನ್ನು ಡಿಸೆಂಬರ್-2022ನೇ ಮಾಹೆಯಲ್ಲಿ ನಡೆಸಲು ಪೂರ್ವ ತಯಾರಿ ಮಾಡಿಕೊಳ್ಳಲಾಗಿದೆ. ಈ ಸಂಬಂಧ ಸದ್ಯದಲ್ಲೇ ಅಧಿಸೂಚನೆ ಹೊರಡಿಸಲಾಗುವುದು, ಪರೀಕ್ಷೆ ತೆಗೆದು ಕೊಳ್ಳುವ ಅಭ್ಯರ್ಥಿಗಳ ಅರ್ಜಿಗಳನ್ನು ಮಂಡಳಿ ನಿಗದಿಪಡಿಸಿದ ಪರೀಕ್ಷಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ನಮೂದಿಸಲು ಅವಕಾಶವಿದ್ದು ಈ ಸಂಬಂಧದಲ್ಲಿ ಪರೀಕ್ಷಾರ್ಥಿಗಳಿಗೆ ಸಂಗೀತ, ನೃತ್ಯ, ತಾಳವಾದ್ಯ ವಿಷಯಗಳನ್ನು ಕಲಿಸುತ್ತಿರುವ ಶಿಕ್ಷಕರ /ವಿದ್ವಾಂಸರ ನೋಂದಣಿ ಸಂಖ್ಯೆಯನ್ನು ಕಡ್ಡಾಯವಾಗಿ ದಾಖಲಿಸಬೇಕಾಗಿರುತ್ತದೆ, ಅದರನ್ವಯ ಆನ್‌ಲೈನ್ ಮೂಲಕ ಶಿಕ್ಷಕರ ನೋಂದಣಿ ಪ್ರಕ್ರಿಯೆಗಾಗಿ ಮಂಡಳಿಯ ಜಾಲತಾಣ www.sslc.karnataka.gov.in ದಲ್ಲಿ ಅವಕಾಶ ಕಲ್ಪಿಸಿದೆ, ಈ ಕುರಿತಂತೆ ಈ ಕೆಳಕಂಡ ಸೂಚನೆಗಳನ್ನು ಪಾಲಿಸಲು ಸೂಚಿಸಿದೆ,

- **ಶಿಕ್ಷಕರ ಆನ್‌ಲೈನ್ ನೋಂದಣಿ :**

ಆನ್‌ಲೈನ್ ಅರ್ಜಿಯಲ್ಲಿ ಶಿಕ್ಷಕರ ಹೆಸರು, ಮೌಲ್ಯಮಾಪನ ಮಾಡುವ ವಿಷಯ, ತಂದೆಯ ಹೆಸರು, ಜನ್ಮದಿನಾಂಕ, ದೈಹಿಕ ಸ್ಥಿತಿ, ಬೋಧನಾನುಭವ, ಮೌಲ್ಯಮಾಪನದ ಅನುಭವ, ಆಧಾರ್ ಸಂಖ್ಯೆ, ಮೊಬೈಲ್ ಸಂಖ್ಯೆ, ವಿಳಾಸ, ಭಾವಚಿತ್ರ, ಸಹಿ, ವಿದ್ಯಾರ್ಹತೆಯ ಪ್ರಮಾಣಪತ್ರ, ಲಭ್ಯವಿದ್ದಲ್ಲಿ ಕ.ಪ್ರೌ.ಶಿ.ಪ ಮಂಡಳಿಯ ಮೌಲ್ಯಮಾಪಕರ ನೋಂದಣಿ ಸಂಖ್ಯೆ (ಹಳೆಯದು), ತಮ್ಮ ಬಳಿ ಅಭ್ಯಾಸಮಾಡಿ ಪ್ರಸ್ತುತ ಸಾಲಿನ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ಸಂಖ್ಯೆ ಇತ್ಯಾದಿ ಮಾಹಿತಿಗಳನ್ನು ನಮೂದಿಸಿ ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಬೇಕು. ನೋಂದಣಿ ಮಾಡಿಕೊಂಡ ನಂತರ ನೀಡಲಾಗುವ ಶಿಕ್ಷಕರ ಹೊಸ ನೋಂದಣಿ ಸಂಖ್ಯೆಯನ್ನು ಮುಂದಿನ ಪರೀಕ್ಷಾ ಪ್ರಕ್ರಿಯೆಗಳಿಗೆ ಬಳಸಿಕೊಳ್ಳುವುದು.

ಮಂಡಳಿ ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಹೊಂದದೇ ಖಾಸಗಿಯಾಗಿ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಕಲಿಸುತ್ತಿರುವ ಶಿಕ್ಷಕರು /ವಿದ್ವಾಂಸರು /ಕಲಾವಿದರುಗಳಿಗೂ ಸಹ ಅಭ್ಯರ್ಥಿಗಳನ್ನು ಪರೀಕ್ಷೆಗೆ ನೋಂದಾಯಿಸುವ ಸಲುವಾಗಿ, ನೋಂದಣಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ. ಆದರೆ ಅವರುಗಳು ಮಂಡಳಿಯ ಪರೀಕ್ಷಾ ಪ್ರಕ್ರಿಯೆಗಳಲ್ಲಿ ತೊಡಗಿಸಿ ಕೊಳ್ಳಲು ಅವಕಾಶವಿರುವುದಿಲ್ಲ.

- **ಕ.ಪ್ರೌ.ಶಿ.ಪ ಮಂಡಳಿಯಿಂದ ಶಿಕ್ಷಕರ ಅರ್ಜಿ ಅನುಮೋದನೆ:**

ಶಿಕ್ಷಕರು ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡ ನಂತರ ಸದರಿ ಅರ್ಜಿಗಳನ್ನು ಮಂಡಳಿಯ ಹಂತದಲ್ಲಿ ಪರಿಶೀಲಿಸಿ, ಅನುಮೋದನೆ ನೀಡಲಾಗುವುದು. ಒಂದು ವೇಳೆ ಶಿಕ್ಷಕರ ವಿವರಗಳಲ್ಲಿ ವ್ಯತ್ಯಾಸ /ಅಸ್ಪಷ್ಟತೆ ಇದ್ದಲ್ಲಿ ನೋಂದಣಿಯ ಅರ್ಜಿಯನ್ನು ಮಂಡಳಿಯ ಹಂತದಲ್ಲಿ ತಿರಸ್ಕರಿಸಲಾಗುವುದು. ಅರ್ಜಿಯು ಅನುಮೋದನೆ /ತಿರಸ್ಕೃತ ಆಗಿರುವ ಬಗ್ಗೆ ಶಿಕ್ಷಕರ ನೋಂದಾಯಿತ ಮೊಬೈಲ್ ಸಂಖ್ಯೆಗೆ ಎಸ್.ಎಮ್.ಎಸ್ ರವಾನಿಸಲಾಗುವುದು.

- **ಶಿಕ್ಷಕರ ನೋಂದಣಿ ಶುಲ್ಕ ಪಾವತಿಸುವುದು:**

ಶಿಕ್ಷಕರು ಈಗಾಗಲೇ ಮಂಡಳಿಯಲ್ಲಿ ಆಫ್‌ಲೈನ್ ವ್ಯವಸ್ಥೆಯಲ್ಲಿ ನೋಂದಣಿ ಮಾಡಿದ್ದು, ಹಳೆಯ ನೋಂದಣಿ ಸಂಖ್ಯೆ ನಮೂದಿಸಿದ್ದಲ್ಲಿ, ಶಿಕ್ಷಕರು ನೋಂದಣಿ ಶುಲ್ಕ ಪಾವತಿಸುವಂತಿಲ್ಲ.

ಹೊಸದಾಗಿ ನೋಂದಣಿ ಮಾಡಿಕೊಳ್ಳುವ ಶಿಕ್ಷಕರ ನೋಂದಣಿ ಶುಲ್ಕ ರೂ. 210/– ( ರೂ ಎರಡುನೂರಾ ಹತ್ತು) ಗಳನ್ನು ಮಂಡಳಿಯ ಜಾಲತಾಣದಲ್ಲಿ ಲಭ್ಯಗೊಳಿಸಿರುವ ಆನ್‌ಲೈನ್ ಪೇಮೆಂಟ್ ಆಯ್ಕೆ ಬಳಸಿ ಪಾವತಿಸಬೇಕಾಗಿರುತ್ತದೆ.

- <u>ಶಿಕ್ಷಕರ ನೋಂದಣಿ ಅರ್ಜಿ ಡೌನ್‌ಲೋಡ್ ಮಾಡಿಕೊಳ್ಳುವುದು:</u>

ಶಿಕ್ಷಕರ ನೋಂದಣಿ, ಅನುಮೋದನೆ ಹಾಗೂ ಶುಲ್ಕ ಪಾವತಿಯ ನಂತರ ಮಂಡಳಿಯ ಜಾಲತಾಣದಲ್ಲಿ ಲಭ್ಯಗೊಳಿಸಿರುವ ಡೌನ್‌ಲೋಡ್ ಅಪ್ಲಿಕೇಶನ್ ಆಯ್ಕೆ ಬಳಸಿ ಶಿಕ್ಷಕರ ನೋಂದಣಿ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ಒಂದು ವೇಳೆ ಅರ್ಜಿಯ ಮಾಹಿತಿಗಳಲ್ಲಿ ತಿದ್ದುಪಡಿಗಳಿದ್ದಲ್ಲಿ ಮಂಡಳಿಯನ್ನು ಸಂಪರ್ಕಿಸಿ ಸರಿಪಡಿಕೊಳ್ಳುವುದು.

ಶಿಕ್ಷಕರು ಕಡ್ಡಾಯವಾಗಿ ಆನ್‌ಲೈನ್ ನೋಂದಣಿಯಲ್ಲಿ ಜನರೇಟ್ ಆಗುವ ಶಿಕ್ಷಕರ ಹೊಸ ಸಂಕೇತವನ್ನು, ತಮ್ಮ ಬಳಿ ಅಭ್ಯಾಸ ಮಾಡುತ್ತಿದ್ದು, ಪ್ರಸಕ್ತ ಸಾಲಿನ ಪರೀಕ್ಷೆಗೆ ನೋಂದಣಿ ಮಾಡಿಕೊಳ್ಳುವ ಅಭ್ಯರ್ಥಿಗಳಿಗೆ ನೀಡುವುದು. ಅಭ್ಯರ್ಥಿಗಳು ಶಿಕ್ಷಕರ ಹೊಸ ನೋಂದಣಿ ಸಂಖ್ಯೆಯನ್ನು ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನಮೂದು ಮಾಡಬೇಕಾಗಿರುತ್ತದೆ. ಇಲ್ಲವಾದಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಸಲು ಅಭ್ಯರ್ಥಿಗಳಿಗೆ ಅವಕಾಶವಿರುವುದಿಲ್ಲ.

- ಈಗಾಗಲೇ ಆನ್‌ಲೈನ್‌ನಲ್ಲಿ ನೋಂದಾಯಿಸಿದ ಶಿಕ್ಷಕರು ನಮೂದಿಸಿರುವ ಮಾಹಿತಿಯನ್ನು, ಬದಲಾವಣೆಗಳಿದ್ದಲ್ಲಿ ಅಪ್‌ಡೇಟನ್ನು ಕಡ್ಡಾಯವಾಗಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ, ಇಂತಹ ಶಿಕ್ಷಕರು ಮಂಡಳಿಯ ಜಾಲತಾಣದಲ್ಲಿ [Evaluators Registration Updation ( For Already Registered Previous Year Evaluators ) ] ಆಯ್ಕೆ ಬಳಸಿ ಅಗತ್ಯ ಮಾಹಿತಿಗಳನ್ನು ಅಪ್‌ಡೇಟ್ ಮಾಡಿಕೊಳ್ಳಬೇಕು. ಈ ಮಾಹಿತಿಗಳನ್ನು ಸಂಗೀತ ವಿಭಾಗದ ಮುಖ್ಯಸ್ಥರು ತಮ್ಮ ಲಾಗಿನ್‌ನಲ್ಲಿ ಅನುಮೋದಿಸಿದ ನಂತರವಷ್ಟೇ ಶಿಕ್ಷಕರು ಆನ್‌ಲೈನ್‌ನಲ್ಲಿ ಶಿಕ್ಷಕರ ಅರ್ಜಿಯ ಮುದ್ರಿತ ಪ್ರತಿಯನ್ನು ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ, ಈ ಸಂಬಂಧ ವಿವರವಾದ FLOW CHART ಅನ್ನು ಮಂಡಳಿಯ ಜಾಲತಾಣದಲ್ಲಿ ಪ್ರಕಟಿಸಲಾಗಿದೆ.

ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳ ಶಿಕ್ಷಕರ ನೋಂದಣಿಗೆ ಸಂಬಂಧಿಸಿದಂತೆ ವಿವರವಾದ ಫ್ಲೋಚಾರ್ಟ್‌ನ್ನು ಮಂಡಳಿಯ ಜಾಲತಾಣದಲ್ಲಿ ಲಭ್ಯಮಾಡಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ **080–23360109** ಸಂಪರ್ಕಿಸಬಹುದಾಗಿದೆ.

[ಗೋಪಾಲಕೃಷ್ಣ ಹೆಚ್.ಎನ್]
ನಿರ್ದೇಶಕರು (ಪರೀಕ್ಷೆಗಳು)

<u>ಪ್ರತಿಯನ್ನು</u>

1. ರಾಜ್ಯದ ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(ಡಯಟ್)ಗಳ ಉಪನಿರ್ದೇಶಕರು(ಅಭಿವೃದ್ಧಿ) ರವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ,
2. ಶಾಖಾಧಿಕಾರಿಗಳು, ಗಣಕಶಾಖೆ (ಇತರೆ ಪರೀಕ್ಷೆಗಳ ವಿಭಾಗ)ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.

**KARNATAKA SECONDARY EDUCATION EXAMINATION BOARD (OTHER EXAMS)**
**6th Cross, Malleshwaram, Bengaluru – 560 003**

**FLOW CHART-1**

**FLOW CHART FOR ONLINE EVALUATOR'S REGISTRATION (NEW) - MUSIC EXAMINATION.**

https://kseeb.karnataka.gov.in/checkapi/musiconline

↓

Click on Online Registration Application(Music/Dance/Talavadya Examination)

↓

Enter Evaluator's details
(Name, Exam, DOB, Qualification.......)

↓

Upload Evaluator's Photo
(60-80kb size, in jpeg format)

↓

Upload Evaluator's Signature
(20-50kb size, in jpeg format)

↓

Upload Evaluator's Qualification Certificate
(Upto 1 MB Size)

↓

Upload Evaluator's Address prof
(Upto 1 MB Size)

↓

Click on check Box for Declaration

↓

**Click on Save and Get KSEEB Number**

**Note:**

1.After Approval from KSEEB, OTEREXAMS, MUSIC SECTION, follow the below steps

- Make payment (ONLY FOR NEW EVALUATOR'S REGISTRATION).
- Download Application

KARNATAKA SECONDARY EDUCATION EXAMINATION BOARD (OTHER EXAMS)

**6th Cross, Malleshwaram, Bengaluru – 560 003**

**FLOW CHART-2**

**FLOW CHART FOR ONLINE EVALUATOR'S REGISTRATION (FOR ALREADY REGISTERED PREVIOUS YEAR EVALUATORS) - MUSIC EXAMINATION.**

https://kseeb.karnataka.gov.in/checkapi/musiconline

↓

Click on Evaluator Registration Updation (FOR ALREADY REGISTERED PREVIOUS YEAR EVALUATORS)

↓

Enter Evaluator Code

↓

Enter Mobile Number

↓

Get OTP/Validate OTP

↓

Click On View Application

↓

Update Necessary Changes

↓

Click on check Box for Declaration

↓

**Click on Save And Update Application**

**Note:**

1. After Approval from KSEEB, OTEREXAMS, MUSIC SECTION Download Updated Application.